51

# ಕರ್ನಾಟಕ ಸರ್ಕಾರದ ನಡವಳಿಗಳು

**ವಿಷಯ:** ಜಿಲ್ಲಾ ಮಾನವ ಅಭಿವೃದ್ಧಿ ವರದಿಗಳ ಮುದ್ರಣ ಹಾಗೂ ವಿತರಣಾ ಕಾರ್ಯಕ್ಕೆ ಅನುದಾನವನ್ನು ಎಲ್ಲಾ ಜಿಲ್ಲಾ ಪಂಚಾಯತ್‌ನ ಮುಖ್ಯ ಕಾರ್ಯನಿರ್ವಹಣಾಧಿಕಾರಿಗಳಿಗೆ ಬಿಡುಗಡೆ ಮಾಡುವ ಬಗ್ಗೆ.

**ಓದಲಾಗಿದೆ:** ಮಾನವ ಅಭಿವೃದ್ಧಿ ವರದಿಗಳ ಮುದ್ರಣ ಕಾರ್ಯ ಕುರಿತು ದಿನಾಂಕ: 21.10.2014ರಂದು ಸರ್ಕಾರದ ಕಾರ್ಯದರ್ಶಿಗಳು, ಯೋಜನಾ ಇಲಾಖೆ ಇವರ ಅಧ್ಯಕ್ಷತೆಯಲ್ಲಿ ನಡೆದ ಸಭೆಯ ನಡವಳಿ.

**ಪ್ರಸ್ತಾವನೆ:**

ಮೇಲೆ ಓದಲಾದ ದಿ:21.10.2014ರಂದು ಸರ್ಕಾರದ ಕಾರ್ಯದರ್ಶಿಗಳು, ಯೋಜನಾ ಇಲಾಖೆ, ಇವರ ಅಧ್ಯಕ್ಷತೆಯಲ್ಲಿ ನಡೆದ ಸಭೆಯ ನಡವಳಿಯಂತೆ ಪ್ರತಿ ಜಿಲ್ಲೆಯ **'ಜಿಲ್ಲಾ ಮಾನವ ಅಭಿವೃದ್ಧಿ ವರದಿ-2014'**ವು ತಜ್ಞರಿಂದ ಪರಾಮರ್ಶೆಗೊಳಪಟ್ಟು, ಜಿಲ್ಲಾ ಪಂಚಾಯತ್‌ನ ಮುಖ್ಯ ಕಾರ್ಯ ನಿರ್ವಹಣಾಧಿಕಾರಿಗಳ ಮೇಲ್ವಿಚಾರಣೆಯಲ್ಲಿ ಜಿಲ್ಲಾ ಮಟ್ಟದ ಎಲ್ಲಾ ಅಧಿಕಾರಿಗಳ ಸಹಕಾರದೊಂದಿಗೆ ಪೂರ್ಣಗೊಳ್ಳುತ್ತಿದ್ದು, ಮುದ್ರಣ ಕಾರ್ಯಕ್ಕೆ ಸಿದ್ಧವಾಗುತ್ತಿವೆ.

30 ಜಿಲ್ಲೆಗಳಿಂದ ಕನ್ನಡ ಹಾಗೂ ಆಂಗ್ಲ ಭಾಷೆಯ ಒಟ್ಟು 24,000 ಪ್ರತಿಗಳಾಗುತ್ತಿದ್ದು, ಇಷ್ಟೂ ಪ್ರತಿಗಳನ್ನು ಒಂದೇ ಕಡೆ ಮುದ್ರಿಸಲು ಹಾಗೂ ಸಂಗ್ರಹಿಸಿ ಒಟ್ಟಿಗೆ ಇಡಲು ಸ್ಥಳಾವಕಾಶವಿಲ್ಲದಿರುವುದರಿಂದ, ಜೊತೆಗೆ ಎಲ್ಲಾ ಜಿಲ್ಲೆಗಳ ವರದಿಗಳನ್ನು ಒಂದೇ ಕಾಲಕ್ಕೆ ಮುದ್ರಿಸುವ ಕೆಲಸ ಕಷ್ಟಕರವಾದ್ದರಿಂದ ಹಾಗೂ ಅವುಗಳನ್ನು ಒಂದೇ ಜಾಗದಿಂದ ವಿತರಿಸುವುದು ಅನಾವಶ್ಯಕ ಹೊರೆಯಾಗುವುದರಿಂದ, ಮುದ್ರಣ ಹಾಗೂ ವಿತರಣೆ ಕಾರ್ಯವನ್ನು ಆಯಾ ಜಿಲ್ಲೆಯ ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯನಿರ್ವಹಣಾಧಿಕಾರಿಗಳಿಗೆ ವಹಿಸುವುದು ಎಲ್ಲಾ ರೀತಿಯಿಂದ ಸೂಕ್ತವೆಂದು ನಿರ್ಧರಿಸಲಾಗಿದೆ.

ಕನ್ನಡ ಹಾಗೂ ಆಂಗ್ಲ ಭಾಷೆಯ ಒಂದು ಪ್ರತಿಗೆ ತಗಲುವ ವೆಚ್ಚ ನಿರ್ಧರಿಸಲು ಬೆಂಗಳೂರಿನ ಸುಮಾರು 20 ಜನ ವೃತ್ತಿಪರ ಮುದ್ರಕರನ್ನು ಸಂಪರ್ಕಿಸಲಾಗಿದ್ದು, ಅವರ ಪೈಕಿ ನಾಲ್ಕು ಪ್ರಿಂಟರ್ಸ್‌ಗಳಿಂದ ಬಂದ ಮಾಹಿತಿಯನ್ನು ಗಮನದಲ್ಲಿರಿಸಿ, ಒಂದು ಪ್ರತಿಯ ಮುದ್ರಣ ಹಾಗೂ ವಿತರಣಾ ಖರ್ಚನ್ನೊಳಗೊಂಡಂತೆ ರೂ. 650/- ರಂತೆ ನಿರ್ಧರಿಸಲಾಗಿದೆ.

ಪ್ರತಿ ಜಿಲ್ಲೆ ಒಟ್ಟು 800 ಪ್ರತಿಗಳನ್ನು (400-ಕನ್ನಡ ಮತ್ತು 400-ಆಂಗ್ಲ) ಮುದ್ರಿಸಬೇಕಾಗಿದ್ದು, ಮೇಲೆ ನಿರ್ಧರಿಸಿದಂತೆ ಒಂದು ಪ್ರತಿಗೆ ಮುದ್ರಣ ಹಾಗೂ ವಿತರಣಾ ಖರ್ಚನ್ನೊಳಗೊಂಡಂತೆ ರೂ. 650/- ರಂತೆ 800 ಪ್ರತಿಗಳ (400-ಕನ್ನಡ ಮತ್ತು 400-ಆಂಗ್ಲ) ಬೆಲೆ ರೂ. 5,20,000/-ಗಳಾಗುತ್ತಿದ್ದು, ಸದರಿ ಮೊತ್ತವನ್ನು 30 ಜಿಲ್ಲಾ ಪಂಚಾಯತ್‌ಗಳ ಮುಖ್ಯ ಕಾರ್ಯನಿರ್ವಹಣಾಧಿಕಾರಿಗಳಿಗೆ ಬಿಡುಗಡೆ ಮಾಡಬೇಕಾಗಿರುತ್ತದೆ. ಅದರಂತೆ ಈ ಕೆಳಕಂಡ ಆದೇಶ.

## ಸರ್ಕಾರದ ಆದೇಶ ಸಂ: ಪಿಡಿ 90 ಪಿಎಸ್‌ಡಿ 2014, ಬೆಂಗಳೂರು, ದಿನಾಂಕ: 12-11-2014

ಪ್ರಸ್ತಾವನೆಯಲ್ಲಿನ ವಿವರಣೆಯ ಹಿನ್ನೆಲೆಯಲ್ಲಿ, ಜಿಲ್ಲಾ ಮಾನವ ಅಭಿವೃದ್ಧಿ ವರದಿಗಳನ್ನು ಮುದ್ರಿಸಿ ವಿತರಿಸಲು ರಾಜ್ಯದ ಎಲ್ಲಾ ಜಿಲ್ಲಾ ಪಂಚಾಯತ್‌ನ ಮುಖ್ಯ ಕಾರ್ಯನಿರ್ವಹಣಾಧಿಕಾರಿಗಳಿಗೆ ರೂ.1,56,00,000/-(ರೂಪಾಯಿ ಒಂದು ಕೋಟಿ ಐವತ್ತಾರು ಲಕ್ಷಗಳು ಮಾತ್ರ)ಗಳ ಅನುದಾನವನ್ನು ಈ ಕೆಳಕಂಡಂತೆ ಬಿಡುಗಡೆ ಮಾಡಲು ಆದೇಶಿಸಲಾಗಿದೆ.

| ಕ್ರ. ಸಂ. | ಜಿಲ್ಲಾ ಪಂಚಾಯತ್‌ನ ಮುಖ್ಯ ಕಾರ್ಯನಿರ್ವಹಣಾಧಿಕಾರಿಗಳು | ಬಿಡುಗಡೆ ಮಾಡಲಾದ ಅನುದಾನ (ರೂ.) |
|---|---|---|
| 1 | ಬಾಗಲಕೋಟೆ ಜಿಲ್ಲೆ | ರೂ. 5,20,000/- |